ಇಟ್ಟಿರತಕ್ಕ ಸೇಂಗಾ ಪೀಕು ಉಪ್ಪು ನೀರಿನಿಂದಾಗಿ ಹಾಳಾಗಿದೆ. ಈಗಾಗಲೇ ಸಂಬಂಧಪಟ್ಟ ತಹಶೀಲ್ದಾರರು ಕಛೇರಿಗೆ ತೊಂದರೆಗೊಳಗಾದ ರೈತರು ಬಂದು ಈ ವಿಷಯವನ್ನು ತಿಳಿಸಿದ್ದಾರೆ. ಸರ್ಕಾರದವರು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಯಾವ ರೈತರ ಸೇಂಗಾ ಪೀಕು ಸಂಪೂರ್ಣವಾಗಿ ಹಾಳಾಗಿ ಹೋಗಿದೆ ಅಂಥವರನ್ನು ಗುರುತಿಸಿ ಅವರಿಗೆ ಏನಾದರೂ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಲ್. ಗೌಡ.—ಇದರ ಬಗ್ಗೆ ಹೇಳಿಕೆಯನ್ನು ನಾನು ಆಮೇಲೆ ಕೊಡುತ್ತೇನೆ.

(IV) ಎಂ.ಎಸ್.ಸಿ./ಬಿ.ಎಸ್.ಸಿ. ಸಿರಿಕಲ್ಚ್ಯರ್ ಬಗ್ಗೆ

ಶ್ರೀ ಬಿ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಎಂ.ಎಸ್.ಸಿ. ಸಿರಿಕಲ್ಚ್ಯರ್ ಬಿ.ಎಸ್.ಸಿ. ಸಿರಿಕಲ್ಚ್ಯರ್‌ನ್ನು ಬೆಂಗಳೂರು ವಿಶ್ವವಿದ್ಯಾನಿಲಯದವರು ೧೯೮೦ರಲ್ಲಿ ಪ್ರಾರಂಭ ಮಾಡಿದರು. ಎಂ.ಎಸ್.ಸಿ. ಸ್ನಾತಕೋತ್ತರ ಪದವಿಯನ್ನು ಪಡೆದು ಪರಿಣತಿಯನ್ನು ಪಡೆದಿರತಕ್ಕ ವ್ಯಕ್ತಿಗಳಿಗೆ ಸರ್ಕಾರದವರು ರೇಷ್ಮೆ ಇಲಾಖೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳತಕ್ಕ ಅವಕಾಶವನ್ನು ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ. ಇಂತಹ ಒಂದು ಉದ್ದೇಶವಟ್ಟುಕೊಂಡೇ ಸರ್ಕಾರದವರು ಈ ಸ್ನಾತಕೋತ್ತರ ಪದವಿಯನ್ನು ಪ್ರಾರಂಭ ಮಾಡಿದರು. ಸುಮಾರು ೧೯ ವಿದ್ಯಾರ್ಥಿಗಳು ಈ ಪದವಿಯನ್ನು ಪಡೆದು ಬಂದಿದ್ದರೂ, ಇದುವರೆಗೂ ಅವರಿಗೆ ಸರ್ಕಾರದವರು ಯಾವ ರೀತಿಯ ಉದ್ಯೋಗವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಲಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿ ಪ್ರಾತನಾಡತಕ್ಕಂಥ ಸಂದರ್ಭದಲ್ಲಿ ಸೂಕ್ತ ಭರವಸೆಯನ್ನು ಕೂಡಾ ಕೊಟ್ಟಿದ್ದಾರೆ. ಆದು ಇವತ್ತಿನವರೆಗೂ ಈಡೇರಿಲ್ಲ. ರೇಷ್ಮೆ ಇಲಾಖೆಯಲ್ಲಿ ಅನೇಕ ಹುದ್ದೆಗಳನ್ನು ನಿರ್ಮಾಣ ಮಾಡಿ ಅಭ್ಯರ್ಥಿಗಳನ್ನು ಕರೆಯುತ್ತಿದ್ದಾರೆ. ಆದರೆ ಇವರಿಗೆ ಅರ್ಹತೆ ಇದ್ದಾಗ್ಯೂ ನೇಮಕಾತಿಯ ನಿಯಮಗಳಲ್ಲಿ ಅವಕಾಶ ಇಲ್ಲದೇ ಇದ್ದುದರಿಂದ ಇವರು ಅರ್ಜಿಯನ್ನೂ ಸಹ ಹಾಕುವಂತಿಲ್ಲ, ಆದ್ದರಿಂದ ಕರ್ನಾಟಕ ಲೋಕಸೇವಾ ಆಯೋಗದಲ್ಲಿಯಾದರೂ ಸಂಬಂಧಪಟ್ಟ ಹುದ್ದೆಗಳನ್ನು ಭರ್ತಿ ಮಾಡುವಾಗ ಇವರಿಗೆ ಅಧ್ಯತೆಯ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಸೂಕ್ತ ಅವಕಾಶ ಮಾಡಬೆಕಾದುದು ಸರ್ಕಾರದವರ ಕರ್ತವ್ಯವೆಂದು ಹೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳವರು).—ಸಿರಿಕಲ್ಚರ್ ಡಿಪ್ಲೊಮಾ ಮತ್ತು ಪೋಸ್ಟ್ ಗ್ರಾಜ್ಯುಯೇಟ್ ಆಗಿರುವವರಿಗೆ ಕೆಲಸವನ್ನು ಕೊಡುವ ಸಲುವಾಗಿ ನಿಯಮಗಳನ್ನು ಬದಲಾಯಿಸಬೆಕೆಂದು ಹೇಳಿ ನನ್ನ ಕಡೆಯಿಂದ ಈಗಾಗಲೇ ಸೂಚನೆ ಹೋಗಿದೆ. ಇದು ಸ್ವಲ್ಪ ತಡವಾಗಿದೆ. ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಶರಾವತಿಯಿಂದ ಮುಳುಗಡೆಯಾದ ರೈತರು ಬಂದು ನೆಲೆಸಿ, ಸಾಗುವಳಿಗೆ ಯೋಗ್ಯ ಭೂಮಿಯನ್ನು ನೋಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಸುಮಾರು ೫೦–೬೦ ಎಕರೆ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಈ ಭೂಮಿಯನ್ನು ಅವರಿಗೆ ಸರ್ಕಾರದವರು ಮಂಜೂರು ಕೂಡಾ ಮಾಡಿಲ್ಲ ಮತ್ತು ಪಾತೆಯನ್ನು ಮಾಡಿ ಕೊಟ್ಟಿಲ್ಲ. ಈ ವಿಷಯದ ಬಗ್ಗೆ ರೈತರು ಅಫೀಸುಗಳಿಗೆ, ತಿರುಗಿ ತಿರುಗಿ, ಅಧಿಕಾರಿಗಳಿಗೆ ಲಂಚ ಕೊಟ್ಟು ದಿವಾಳಿಯಾಗಿದ್ದಾರೆ. ಈ ಸಾಗುವಳಿ ಭೂಮಿಯನ್ನು ಮಂಜೂರು ಮಾಡಿ ಕೊಡುವುದಕ್ಕೆ ಸರ್ಕಾರದವರು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಲ್. ಗೌಡ.—ಇದರ ಬಗ್ಗೆ ಮಾಹಿತಿಯನ್ನು ನಂತರ ತರಿಸಿಕೊಡುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮಾನ್ಯ ಸಭಾಪತಿಗಳೇ, ಮಹದೇಪುರ ಪೋಲಿಸ್ ಸ್ಟೇಷನ್ನಿನಲ್ಲಿ ಚಿನ್ನಪ್ಪ ಎನ್ನುವವರ ಮೇಲೆ ಮಹದೇಪುರದ ಸರ್ವೆ ನಂಬರ್ ೫೫ರ ಬಗ್ಗೆ ಸಿವಿಲ್ ಡಿಸ್ಪ್ಯೂಟ್ ಇದ್ದದ್ದು ತಮಗೆ ರಕ್ಷಣೆ ಬೆಕೆಂದೇ ತಾ. ೬-೧-೮೪ ೭-೧-೮೪ರಂದು ಮತ್ತೆ ೧೧-೧-೮೪ ದೂರು ಕೊಟ್ಟರೂ ಸಹ ಮಹದೇಪುರದ ಪೋಲೀಸ್ ಸ್ಟೇಷನ್ನಿನ ಅಧಿಕಾರಿಗಳು ಅವರಿಗೆ ರಕ್ಷಣೆ ಕೊಡದೆ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಅವರ ತಾಯಿಗೆ ಹೆಡ್ ಫ್ರಾಕ್ಚರ್ ಆಗಿದ್ದು, ತಂದೆಗೆ ಕಾಲು ಫ್ರಾಕ್ಚರ್ ಆಗಿದೆ. ಇದರೂ ಸಹ ಇವರಿಗೆ ಪೋಲಿಸರಿಂದ ರಕ್ಷಣೆ

ದೊರೆತಿಲ್ಲ. ಸಾಗರ ಮಂಗಲ ಹಳ್ಳಿಯ ನೂರಾರು ಜನ ಇವರಿಂದ ತೊಂದರೆಗೊಳಗಾದವರು ಊರು ಬಿಟ್ಟು ಹೋಗುತ್ತಿದ್ದಾರೆ. ಇವರು ರೈತರಿಗೆ ರಕ್ಷಣೆ ಕೊಡುವ ಬದಲು ರಾತ್ರಿಯ ಸಮಯದಲ್ಲಿ ಇವರನ್ನು ಕರೆದುಕೊಂಡು ಹೋಗಿ ದುಡ್ಡು ತೆಗೆದುಕೊಂಡು ಬಿಟ್ಟು ಬಿಟ್ಟಿದ್ದಾರೆ. ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡು ಜನಗಳಿಗೆ ರಕ್ಷಣೆ ದೊರಕುವ ಹಾಗೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).– ಮಾನ್ಯ ಸದಸ್ಯರು ಸಂಬಂಧಪಟ್ಟವರಿಂದ ದೂರನ್ನು ಕೊಡಿಸಿದರೆ ಅದನ್ನು ನಾವು ವಿಚಾರ ಮಾಡುತ್ತೇವೆ.

ಡಾ।। ವಿ.ಎಸ್. ಆಚಾರ್ಯ.— ಸರ್ಕಾರದವರು ೧೯೭೮–೭೯ರಿಂದ ನೇಮಕ ಮಾಡಿದಂಥ ಕೆ.ಎ.ಎಸ್. ಗ್ರೇಡ್ (೧) ಅಧಿಕಾರಿಗಳ ಒಂದು ಪ್ರಶ್ನೆಯ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಹೈಕೋರ್ಟು ಸುಮಾರು ೫೫ ಸಾರಿ ಇವರ ಪ್ರಮೋಷನ್ ವಿಚಾರದಲ್ಲಿ ರೂಲಿಂಗ್ ಕೊಟ್ಟಿದೆ. ಇವತ್ತು ನ್ಯಾಯಾಲಯದ ರೀತಿ ಪ್ರಮೋಟೀಸ್ ಕೊಡುವಂಥ ಅವಕಾಶ ಮತ್ತು ನೇರ ನೇಮಕಾತಿಯವರಿಗೆ ೫೦ ಪರ್ಸೆಂಟ್ ಇರಬೇಕು ಎಂದು ಎಲ್ಲಾ ವಿಷಯಗಳನ್ನು ಪರಿಗಣಿಸಿ, ಈ ಒಂದು ತೀರ್ಪನ್ನು ಮೇ ೫ನೇ ತಾರೀಖು ಕೊಟ್ಟಿದೆ. ಅದರ ಪ್ರಕಾರ ಬಡ್ತಿಯನ್ನು ಇವರಿಗೆ ಕೊಡಬೇಕಾಗಿದೆ. ನೂರಾರು ಜನ ಅಸಿಸ್ಟೆಂಟ್ ಕಮಿಷನರ್‌ಗಳು ಇವರ ಪ್ರಕಾರ ಪಡೆಯುವಪರಿದ್ದಾರೆ. ಇದೇ ತಿಂಗಳ ೨೭ನೇ ತಾರೀಖು ಇವರ ಪ್ರಮೋಷನ್‌ಗೆ ಸಂಬಂಧಪಟ್ಟ ಹಾಗೆ ಒಂದು ಸ್ಕ್ರೂಟಿನಿ ಕಮಿಟಿಯ ಮಿಟಿಂಗ್ ಇದೆಯೆಂದು ತಿಳಿದು ಬಂದಿದೆ. ಖಂಡಿತವಾಗಿಯೂ ಅನೇಕ ಜನ ಉತ್ಸಾಹಿಯುವಕ ಅಧಿಕಾರಿಗಳು, ರಾಜ್ಯದಲ್ಲಿ ಉತ್ತಮ ಆಡಳಿತ ಕೊಟ್ಟಂಥವರು ಈ ಒಂದು ಅನುಕೂಲವನ್ನು ಪಡೆಯುವರಿದ್ದಾರೆ. ಇದರಲ್ಲಿ ಕೆಲವು ಜನ ವೆಸ್ಟೆಡ್ ಇಂಟರೆಸ್ಟ್ಸ್ ಸೇರಿಕೊಂಡು ಇದಕ್ಕೆ ಉದ್ದೇಶಪೂರ್ವಕವಾಗಿಯೇ ತಡೆ ಕೊಡುತ್ತಾ ಬಂದಿದ್ದಾರೆ. ಇಂಥ ಹಗಲು ಅಪರಾಧಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ಈ ಒಂದು ಅನ್ಯಾಯವನ್ನು ಸರಿಪಡಿಸಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) — ಮಾನ್ಯ ಸದಸ್ಯರು ಕೆ.ಎ.ಎಸ್. ಅಧಿಕಾರಿಗಳ ಪ್ರಮೋಷನ್ ಬಗ್ಗೆ ಹೈಕೋರ್ಟ್ ರೂಲಿಂಗ್ ಆಗಿರುವುದನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಇದನ್ನು ವಿಚಾರ ಮಾಡಿ, ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ವಿ. ಧನಂಜಯಕುಮಾರ್.—ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಕೊಡಮಲೆ ಗ್ರಾಮಕ್ಕೆ ಸೇರಿದ ಸರ್ವೆ ನಂ. ೪೨/೫ರಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿರುವಂಥ ಹರಿಜನರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದಕ್ಕೆ ಇವತ್ತಿನ ದಿವಸ ಪ್ರಯತ್ನ ನಡೆಯುತ್ತಿದೆ. ಸರ್ಕಾರಿ ಅಧಿಕಾರಿಗಳು ಪೊಲೀಸರ ಬಲವನ್ನು ಉಪಯೋಗ ಮಾಡಿಕೊಂಡು ಇಂದು ೧೧ ಗಂಟೆಗೆ ಈ ಹರಿಜನರನ್ನು ಒಕ್ಕಲೆಬ್ಬಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಕಾರಣ ಇಷ್ಟೆ, ಈ ಭೂಮಿಯನ್ನು ಕೆಲವರು ಭೂಮಾಲಿಕರು ವಿತರಣೆ ಮಾಡಿಕೊಂಡು ಸಂಚು ಮಾಡುತ್ತಿದ್ದಾರೆ. ಈ ಭೂಮಿಯನ್ನು ಹರಿಜನರು ತಮಗೆ ಕೊಡಬೇಕೆಂದು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಇವೊತ್ತು ಅಧಿಕಾರಿಗಳು ೧೧ ಗಂಟೆಗೆ ಪೊಲೀಸರನ್ನು ಕರೆದುಕೊಂಡು ಅಲ್ಲಿಗೆ ಹೋಗಿ ಅವರನ್ನು ಜಾಗದಿಂದ ಖಾಲಿ ಮಾಡಿಸುವ ಪ್ರಯತ್ನ ಮಾಡಿ ನೋಟೀಸ್ ಕೂಡಾ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೆ ನೆಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ಕೂಡಲೇ ಇದರ ಬಗ್ಗೆ ತಡೆ ಮಾಡುವಂತೆ ನಿರ್ದೇಶನವನ್ನು ಕೊಡಬೇಕು. ಇಲ್ಲದಿದ್ದರೆ ಅಧಿಕಾರಿಗಳು ೧೧ ಗಂಟೆಗೆ ಹರಿಜನರನ್ನು ಒಕ್ಕಲೆಬ್ಬಿಸಿ, ಪರಿಸ್ಥಿತಿ ಗೊಂದಲಮಯವಾಗುವಂತೆ ಮಾಡುತ್ತಾರೆ. ಸರ್ಕಾರದವರು ಪದೇ ಪದೇ ಹರಿಜನರಿಗೆ ನಾವು ಸಂಪೂರ್ಣ ರಕ್ಷಣೆ ಕೊಡುತ್ತೇವೆಂದು ಹೇಳುತ್ತಾರೆ. ಇದು ಸರ್ಕಾರದ ಭೂಮಿಯಾಗಿರುವಾಗ ತಾವು ಕೂಡಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನವನ್ನು ಕಳುಹಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಇದರ ಬಗ್ಗೆ ೧೧ ಗಂಟೆಗೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆಂದು ೧೦½ ಗಂಟೆಗೆ ಹೇಳುತ್ತಿದ್ದಾರೆ. ಇದನ್ನು ನಾನು ವಿಚಾರ ಮಾಡಿಸಿ ಅನ್ಯಾಯ ಆಗುವ ಹಾಗಿದ್ದರೆ ಅದನ್ನು ತಡೆಹಿಡಿಯುತ್ತೇವೆ. ಅನ್ಯಾಯವಾಗಿದ್ದರೆ ಅದನ್ನು ನಿರ್ಮೂಲನ ಮಾಡುವ ಪ್ರಯತ್ನ ಮಾಡುತ್ತೇವೆ.

೧೦–೩೦ ಎ.ಎಂ.

ಶ್ರೀ ವಿ. ಧನಂಜಯ ಕುಮಾರ್.—ವಿಷಯದ ಗಂಭೀರತೆಯನ್ನು ತಾವು ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ವಿಚಾರ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ.ಡಿ. ಸೋಮಪ್ಪ.—ಮಾನ್ಯ ಸಭಾಪತಿಗಳೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ಸರ್ಕಾರ ಬಂದಮೇಲೆ ಹೊಸದಾಗಿ ಬಡವರಿಗಾಗಿ ಸುಮಾರು ೩೦೦೦ ಸೈಟುಗಳನ್ನು ಹಂಚಿಕೆ ಮಾಡಲಾಗಿದೆಯೆಂದೂ, ಹಂಚಿಕೆ ಮಾಡುವಂಥ ಕಾಲದಲ್ಲಿ ಒಬ್ಬೊಬ್ಬ ಸದಸ್ಯರು ೨೫.೦೦೦ ರೂಪಾಯಿ ಕಲೆಕ್ಟ್ ಮಾಡಿದ್ದಾರೆಂದು ದೂರು ಬಂದಿದೆ, ಇದರ ಬಗ್ಗೆ ಮಾನ್ಯ ಮಂತ್ರಿಯವರು ಸೂಕ್ತ ಉತ್ತರ ನೀಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ಮೂರು ಸಾವಿರ ಸೈಟುಗಳನ್ನು ಹಂಚಲಾಗಿದೆ. ದುಡ್ಡು ತೆಗೆದುಕೊಳ್ಳಲಾಗಿದೆಯೆಂದು ಸುಲಭವಾಗಿ ಹೇಳಿದರೆ ಹೇಗೆ? ದಾಖಲೆ ಇದ್ದರೆ ಕೊಡಿ, ಜವಾಬ್ದಾರಿಯುತವಾಗಿ ಹೇಳಿಕೆಗಳನ್ನು ಕೊಡಬೇಕಾಗುತ್ತದೆ.

ಶ್ರೀ ಜೆ.ಡಿ. ಸೋಮಪ್ಪ.—ನಾನು ಜವಾಬ್ದಾರಿಯುತವಾಗಿಯೇ ಹೇಳಿದ್ದೇನೆ. ನನ್ನ ಗಮನಕ್ಕೆ ಬಂದ ವಿಷಯವನ್ನು ತಿಳಿಸಿದ್ದೇನೆ. ಸೂಕ್ತ ಕ್ರಮ ತೆಗೆದುಕೊಳ್ಳಿ.

ಶ್ರೀ ಎನ್.ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ಹಿರಿಯೂರು ವೈಮಂಗಲ ಶಿಭಿರದಡಿಯಲ್ಲಿ ಯಳನಾಡು ರೈತ ಸಂಘದವರು ನಡೆಸುತ್ತಿರುವ ಸರದಿ ಉಪವಾಸ ೨೫ನೇ ದಿನಕ್ಕೆ ಬಂದಿದೆ. ಅದು ಬಹಳ ವಿಕೋಪಕ್ಕೆ ಹೋಗುವ ಪರಿಸ್ಥಿತಿಯಿರುವುದರಿಂದ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ಬಿ.ಎಲ್. ಗೌಡ.—ಮೊನ್ನೆ ರೈತರನ್ನು ಕರೆಸಿ ಮಾತನಾಡಿದ್ದೇನೆ. ಇವರು ಹೇಳುತ್ತಿರುವುದು ಬೇರೆಯವರ ವಿಚಾರ.

ಅಧ್ಯಕ್ಷರು.—ಪೋಲೀಸಿನವರು ದಾಳಿ ಮಾಡಿದ್ದಾರೆಂದು ಬಂದಿದೆ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ಮನೆಯೊಂದನ್ನು ಶೋಧನೆ ಮಾಡಿ, ಚಾಕು, ಚೈನು ಹಾಗೂ ಚೂರಿಗಳನ್ನು ವಶಪಡಿಸಿಕೊಂಡಿದ್ದಾರೆ.

ಅಧ್ಯಕ್ಷರು.—ನಾನೇ ಓದುತ್ತೇನೆ, ಬೆಂಗಳೂರು ಬಂದ್‌ನಂತರ, ಜಗಜೀವನರಾಂ ನಗರದ ಮನೆಯೊಂದರಲ್ಲಿ ಪೊಲೀಸರು ದಾಳಿ ಮಾಡಿ ಚಾಕು ಚೂರಿ ಮುಂತಾದ ಅಪಾಯಕಾರಿ ಆಯುಧಗಳನ್ನು ವಶಪಡಿಸಿಕೊಂಡಿರುವ ವಿಷಯ ಜನತೆಯಲ್ಲಿ ಕಳವಳ ಉಂಟು ಮಾಡಿರುವುದರಿಂದ ಇದರ ಬಗ್ಗೆ ಸರ್ಕಾರದ ಉತ್ತರವನ್ನು ಬಯಸುತ್ತೇನೆಂದು ಇದೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆ ಸಂಕೇಶ್ವರ ತಾಲ್ಲೂಕಿನಲ್ಲಿ ನೆರೆಹಾವಳಿಯಿಂದ ತೊಂದರೆಗೆ ಒಳಗಾದಂಥ ಜನರಿಗೆ ಸಿಗಬೇಕಾದಂಥ ಧನಸಹಾಯವನ್ನಾಗಲೀ ಪುನರ್ ವ್ಯವಸ್ಥೆಯ ಅನುಕೂಲವನ್ನಾಗಲೀ ಇಲ್ಲಿಯವರೆಗೆ ಮಾಡಿಲ್ಲ. ಸರ್ಕಾರದ ಮಂದಗತಿಯನ್ನು ನೋಡಿ, ಆ ಭಾಗದ ಜನರು ಪ್ರತಿಭಟನ ರೂಪವಾಗಿ ಅನ್ನ ಸತ್ಯಾಗ್ರಹ ಹಾಗೂ ಧರಣಿ ಸತ್ಯಾಗ್ರಹದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಪಕ್ಕದ ಮಹಾರಾಷ್ಟ್ರದ ರಾಜ್ಯದಲ್ಲಿ ತೊಂದರೆ ಒಳಗಾದಂಥ ಜನರಿಗೆ ಸೂಕ್ತ ನೆರವು ಈಗಾಗಲೇ ಒದಗಿಸಿಕೊಟ್ಟಿದ್ದಾರೆ. ಇಲ್ಲೂ ಕೂಡ ಆದಷ್ಟು ಬೇಗ ನೆರವು ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಲ್. ಗೌಡ.—ಮಾನ್ಯ ಅಧ್ಯಕ್ಷರೇ...

ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುವುದು ಒಳ್ಳೆಯದು. ೬೦ ಜನ ಕೂತಿದ್ದಾರೆ, ಎಷ್ಟು ತೊಂದರೆ ಇದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಮಗೆ ಸಮಾಧಾನವಾಗದಿದ್ದರೆ, ಮುಖ್ಯಮಂತ್ರಿಗಳವರಿಂದಲೂ ಕೇಳೋಣ.

ಶ್ರೀ ಬಿ.ಎಲ್. ಗೌಡ.—ಸ್ವಾಮಿ, ಅವರಿಗೆ ಎಷ್ಟು ಹೇಳಿದರೂ ಸಮಾಧಾನವಾಗುವುದಿಲ್ಲ, ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಪ್ರತಿ ಕುಟುಂಬಕ್ಕೆ ೮,೦೦೦ ರೂಪಾಯಿ ಧನಸಹಾಯ ಜೊತೆಗೆ ಥಿರ್ಫಾವದಿ ಸಾಲಗಳನ್ನು ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಅವಮಾನವಾಗತಕ್ಕ ರೀತಿಯಲ್ಲಿ ಧನ ಸಹಾಯ ಕೊಡಬೇಡಿರೆಂದು ನಿವೇದಿಸಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಸದ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರಕ್ಕೆ ೨೫ ಕೋಟಿ ರೂಪಾಯಿ ಸಹಾಯ ಬೇಕೆಂದು ಕೇಳಿದ್ದೆವು. ಅವರು ಕೇವಲ ೫.೫೬ ಕೋಟಿ ಮಾತ್ರ ಕೊಟ್ಟಿದ್ದಾರೆ. ಅದರಲ್ಲಿ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಹದ ನಷ್ಟವೂ ಸೇರಿದೆ. ಮಹಾರಾಷ್ಟ್ರದಲ್ಲಿ ಯಾವರೀತಿ ಕೊಟ್ಟಿದ್ದಾರೆಂಬುದನ್ನು ಮಾಹಿತಿ ತರಿಸಿ, ಅದೇರೀತಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಶಿಕಾರಿಪುರ ತಾಲ್ಲೂಕು ಕುಡದಿನ್ನಿ ಇನ್ನಿತರ ಹೋಬಳಿಗಳಲ್ಲಿ ೧೦೦ಕ್ಕೆ ೫೦ರಷ್ಟು ಜನ ಹರಿಜನರು ಲಂಬಾಣಿಗಳು ಇದ್ದಾರೆ. ಆ ಭಾಗದಲ್ಲಿ ಕೊಯ್ಲು ಮುಗಿಯುತ್ತಿದ್ದಂತೆ ಪಯಸ್ಸಾದವರನ್ನು ಹಾಗೂ ಮಕ್ಕಳನ್ನು ಬಿಟ್ಟು ಹೊಟ್ಟೆಪಾಡಿಗಾಗಿ ಚಿಕ್ಕಮಗಳೂರು ಕಾಫಿ ತೋಟಗಳಲ್ಲಿ ಕೆಲಸ ಮಾಡುವುದಕ್ಕೆ ಹೋಗುತ್ತಾರೆ. ನಾನು ಮೊನ್ನೆ ಜಿಲ್ಲಾಧಿಕಾರಿಗಳನ್ನು ಕರೆದುಕೊಂಡು ಹೋಗಿದ್ದೆ, ಆಲ್ಲಿ ಇನ್ನೂ ಬರಗಾಲದ ಕೆಲಸ ಪ್ರಾರಂಭವಾಗಿಲ್ಲ, ಜಿಲ್ಲಾಧಿಕಾರಿಗಳು ಇನ್ನು ಹಣ ಬಂದಿಲ್ಲವೆಂದು ಹೇಳಿದರು. ಪಲಸೆ ಹೋಗತಕ್ಕ ಗ್ರಾಮಗಳಲ್ಲಿ ಮನೆಯಲ್ಲಿ ದೀಪ ಹಚ್ಚುವವರು ಕೂಡ ಇಲ್ಲ. ದಯವಿಟ್ಟು ತಕ್ಷಣ ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟು, ಬರಗಾಲದ ಕೆಲಸವನ್ನು ಪ್ರಾರಂಭ ಮಾಡಿ, ವಲಸೆ ಹೋಗುವಂಥ ಜನಕ್ಕೆ ಕೂಲಿ ಒದಗಿಸುವ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರಿಗೆ ಒಂದು ವಿಚಾರ ತಿಳಿಸುತ್ತೇನೆ. ಇದೇ ತಿಂಗಳು ೨೬ನೇ ತಾರೀಖಿನಿಂದ ಉದ್ಯೋಗ ಭರವಸೆ ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಆದರಲ್ಲಿ ಶಿಕಾರಿಪುರ ತಾಲ್ಲೂಕು ಸೇರಿದೆಯೋ ಇಲ್ಲವೋ ಗೊತ್ತಿಲ್ಲ. ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಲ್ಲಿ ಈ ಯೋಜನೆಯಿಂದ ವಿಶೇಷವಾದ ಲಾಭ ಜನತೆಗೆ ಸಿಗುತ್ತದೆ. ಶಿಕಾರಿಪುರ ತಾಲ್ಲೂಕು ಸೇರದೇ ಇದ್ದರೂ ಅಲ್ಲಿ ಬರಗಾಲದ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಆ ಭಾಗದಲ್ಲಿ ಕೆರೆ ಕಟ್ಟೆಗಳ ಕೆಲಸ, ರಸ್ತೆ ಕಾಮಗಾರಿ ಕೆಲಸ ಏರ್ಪಾಡು ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಸೇರದಿದ್ದರೆ, ರಿಲೀಫ್ ವರ್ಕ್ ಆದಷ್ಟು ಬೇಗ ಪ್ರಾರಂಭ ಮಾಡಿಸುತ್ತೇನೆ.

ಶ್ರೀ ಎಂ. ಮಹದೇವ್.—ಸ್ವಾಮಿ, ದೇವಸ್ಥಾನದ ಹೆಸರಿನಲ್ಲಿ ಹಣ ಸುಲಿಗೆಯಾಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನನ್ನ ಲಿಖಿತ ಪ್ರಶ್ನೆಗೆ ಉತ್ತರ ಬಂದಿಲ್ಲ.